# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 498/2025

**ಚಾಸಾ–12 ಪ್ರಾಸಾ–9**

| | | |
|---|---|---|
| ಹೆಸರು | – | ವೆಂಕಟೇಶ್ ಜಿ |
| ತಂದೆಯನ ಹೆಸರು | – | ಗಣಪತಿ |
| ವಯಸ್ಸು | – | 45 ವರ್ಷ |
| ವೃತ್ತಿ | – | ಮುಖ್ಯ ಪೇದೆ |
| ವಾಸಸ್ಥಳ | – | ಹೊಸನಗರ. |

(ದಿನಾಂಕಃ **23.07.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ನಾನು ದಿನಾಂಕಃ 07.09.2024 ರಿಂದ ದಿನಾಂಕಃ 28.02.2026 ರವರೆಗೆ ಮುಖ್ಯ ಪೇದೆಯಾಗಿ ಹೊಸನಗರ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 29.10.2024 ರಂದು ನಾನು ಹೊಸನಗರ ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸ 1 ರವರು ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಗುನ್ನಾ ಸಂಖ್ಯೆ 73/2024 ರಂತೆ ಭಾರತೀಯ ನ್ಯಾಯ ಸಂಹಿತಾ ಕಲಂ 303(2) ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

3. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ದೂರು ಆಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ4 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ4(ಬಿ) ಎಂದು ಗುರುತಿಸಲಾಯಿತು.

4. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಪ್ರಥಮ ವರ್ತಮಾನ ವರದಿಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ15 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ15(ಎ) ಎಂದು ಗುರುತಿಸಲಾಯಿತು.

5. ದಿನಾಂಕಃ 30.10.2024 ರಂದು ಚಾಸ 1 ರವರು ತೋರಿಸಿದ ವಾಹನ ಮತ್ತು ಅದರಲ್ಲಿ ತುಂಬಿದ ಮರಳನ್ನು ಚಾಸ 5 ಮತ್ತು ಚಾಸ 6 ರವರ ಸಮಕ್ಷಮ ಹೊಸನಗರ ಪೊಲೀಸ್ ಠಾಣಾ ಆವರಣದಲ್ಲಿ ಬೆಳಗ್ಗೆ 10.30 ರಿಂದ 11.30 ರವರೆಗೆ ಇಲಾಖಾ ಲ್ಯಾಪ್ ಟಾಪ್ ನಲ್ಲಿ ಪಂಚನಾಮೆಯನ್ನು ಜರುಗಿಸಿ ವೀಡಿಯೋ ಚಿತ್ರೀಕರಣ ಮಾಡಿಸಿರುತ್ತೇನೆ.

6. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಅಮಾನತ್ತು ಪಂಚನಾಮೆಯಾಗಿದುದ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ5 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ5(ಸಿ) ಎಂದು ಗುರುತಿಸಲಾಯಿತು.

7. ಸಾಕ್ಷಿಯು ಅಮಾನತ್ತು ಪಂಚನಾಮೆ ಕಾಲಕ್ಕೆ ತೆಗೆದ ಪೊಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನು ಈಗಾಗಲೇ ನಿಪಿ6 ಎಂದು ಗುರುತಿಸ್ಪಟ್ಟಿರುತ್ತದೆ, ಅದೇ ದಿನ ಅಮಾನತ್ತುಪಡಿಸಿಕೊಂಡ ಮರಳು ಮತ್ತು ಲಾರಿಯನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 75/2024 ರಂತೆ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೆದಿಸಿಕೊಂಡಿರುತ್ತೇನೆ.

8. ನಾನು ಅದೇ ದಿನ ಚಾಸ 2 ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 05.11.2024 ರಂದು ಚಾಸ 9 ರವರಿಗೆ ಮರಳು ವಿಲೇವಾರಿ ಮಾಡಿ ವರದಿ ಸಲ್ಲಿಸುವಂತೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ16 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ16(ಎ) ಎಂದು ಗುರುತಿಸಲಾಯಿತು.

9. ಅದೇ ದಿನ ಚಾಸ 7 ರವರಿಗೆ ವಾಹನದ ದಾಖಲೆಗಳನ್ನು ತರುವಂತೆ ಎಆರ್ ಟಿ ಒ ಸಾಗರ ವರೆಗೆ ಕಳುಹಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು

ಈಗಾಗಲೇ ನಿಪಿ9 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ9(ಬಿ) ಎಂದು ಗುರುತಿಸಲಾಯಿತು.

10. ದಿನಾಂಕಃ 08.11.2024 ರಂದು ಚಾಸ7 ರವರು ನೀಡಿದ ಕೆ.ಎ 29 9831 ನೊಂದಣಿ ಸಂಖ್ಯೆಯ ಟಿಪ್ಪರ್ ಲಾರಿಗೆ ಸಂಬಂಧಿಸಿದ ಬಿ ಎಕಿಸಟ್ರಾಕ್ ಅನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ10 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ10(ಬಿ) ಎಂದು ಗುರುತಿಸಲಾಯಿತು.

11. ದಿನಾಂಕಃ 16.11.2024 ರಂದು ಚಾಸ9 ರವರು ನೀಡಿದ ಮರಳು ವಿಲೇವಾರಿ ರಶೀಧಿಯನ್ನು ಪಡೆದುಕಡತಕ್ಕೆ ಅಳಚವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ14 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ14(ಬಿ) ಎಂದು ಗುರುತಿಸಲಾಯಿತು.

12. ದಿನಾಂಕಃ 02.12.2024 ರಂದು ಚಾಸ3 ಮತ್ತು ಚಾಸ4 ರವರ ಸಮಕ್ಷಮ ಆರೋಪಿ 1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಮದ್ಯಾಹ್ನ 1 ಗಂಟೆಯಿಂದ 2 ಗಂಟೆಯವರೆಗೆ ನಮ್ಮ ಇಲಾಖಾ ಲ್ಯಾಪ್ ಟಾಪ್ ನಲ್ಲಿ ಪಂಚನಾಮೆಯನ್ನು ಜರುಗಿಸಿ ಸಾಕ್ಷಿದಾರರ ಸಹಿ ಪಡೆದಿರುತ್ತೇನೆ. ಘಟನಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ1 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ1(ಸಿ) ಎಂದು ಗುರುತಿಸಲಾಯಿತು.

13. ಸಾಕ್ಷಿಯು ಘಟನಾ ಸ್ಥಳದ ಪೊಟೋಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ2 ಎಂದು ಗುರುತಿಸ್ಪಟ್ಟಿರುತ್ತದೆ. ದಿನಾಂಕಃ 06.12.2024 ರಂದು ಕೃತ್ಯ ನಡೆದ ಸ್ಥಳದ ದಾಖಲೆಯನ್ನು ಕೋರಿ ಚಾಸ9 ರವರಿಗೆ ಸದರಿ ಮುಂಬಾರು ಗ್ರಾಮದ ಹೊಳೆಯಲ್ಲಿ ಮರಳು ತುಂಬಲು ಯಾವುದಾದರೂ ಅನುಮತಿ ಕೆ.ಎ 29 9831 ವಾಹನಕ್ಕೆ

ನೀಡಿದ್ದರ ಬಗ್ಗೆ ದಾಖಲೆಯನ್ನು ಕೋರಿ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಸದರಿ ನಿವೇದನೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ17 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ17(ಎ) ಎಂದು ಗುರುತಿಸಲಾಯಿತು.

14. ತಾನು ಅದೇ ದಿನ ಚಾಸ 10 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲೆಯನ್ನು ನೀಡುವಂತೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಸದರಿ ನಿವೇದನೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ18 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ18(ಎ) ಎಂದು ಗುರುತಿಸಲಾಯಿತು.

15. ದಿನಾಂಕಃ 10.12.2024 ರಂದು ಚಾಸ 8 ರವರು ನೀಡಿದ ವರದಿಯನ್ನು ಸ್ವಿಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ12 ಎಂದು ಗುರುತಿಸಲ್ಪಟ್ಟಿರುತ್ತದೆ.

16. ದಿನಾಂಕಃ 16.12.2024 ರಂದು ಚಾಸ 9 ರವರು ನೀಡಿದ ವರದಿಯನ್ನು ಸ್ವಿಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 30.01.2025 ರಂದು ಚಾಸ 10 ರವರು ಕೃತ್ಯ ನಡೆದ ಸ್ಥಳದ ದಾಖಲೆಗಳನ್ನು ನೀಡಿದ್ದು ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ19 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ19(ಎ) ಎಂದು ಗುರುತಿಸಲಾಯಿತು. ಚಾಸ 10 ರವರು ನೀಡಿದ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ20 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ20(ಎ) ಎಂದು ಗುರುತಿಸಲಾಯಿತು.

17. ಸದರಿ ಪ್ರಕರಣದಲ್ಲಿ ತನಿಖೆ ಪೂರ್ಣ ಗೊಂಡು ಆರೋಪಿಗಳ ವಿರುದ್ದ ಸಾಕಷ್ಟು ಸಾಕ್ಷಿ ಆಧಾರಗಳು ಲಭ್ಯವಾಗಿರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷರೋಪಣ ಪಟ್ಟಿ ನಿವೇದಿಸಿಕೊಂಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ.ಎಂ.ಎಲ್ ರವರು ಶ್ರೀ ವೈ.ಪಿ.ಎಂ ರವರ ಪರವಾಗಿ**

1. ನಾನು ದೂರನ್ನು ದಾಖಲಿಸುವ ಪೂರ್ವದಲ್ಲಿ ಚಾಸ 1 ನನ್ನ ಮೇಲಾಧಿಕಾರಿಯಾಗಿ ದೂರನ್ನು ಕೊಟ್ಟಿರುವುದನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ದೂರಿನ ಅನ್ವಯ ಸದರಿ ದೂರು ಮರಳಿಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ನಾನು ಸದರಿ ದೂರು ಮರಳಿಗೆ ಸಂಬಂಧಪಟ್ಟಿದ್ದರಿಂದ ನನಗೆ ಎಂ.ಎಂ.ಆರ್.ಡಿ ಕಾಯ್ದೆ ಅಡಿಯಲ್ಲಿ ಖಾಸಗಿ ದೂರನ್ನು ದಾಖಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

2. ಸದರಿ ಪ್ರಕರಣ ಮರಳಿಗೆ ಸಂಬಂಧಪಟ್ಟಿದ್ದರಿಂದ ನಾನು ಆರೋಪಿಗಳ ವಿರುದ್ಧ ನನ್ನ ತನಿಖಾ ಅವಧಿಯಲ್ಲಿ ಎಂ.ಎಂ.ಆರ್.ಡಿ ಅಡಿಯಲ್ಲಿ ಆರೋಪಿಗಳ ವಿರುದ್ಧ ತನಿಖೆ ಕೈಗೊಂಡಿರುವುದಿಲ್ಲ ಎಂದರೆ ಸರಿ.

3. ಚಾಸ 1 ರವರು ಸದರಿ ವರಾಹನವನ್ನು ತಾನು ದೂರನ್ನು ದಾಖಲಿಸುವ ಪೂರ್ವದಲ್ಲೇ ಪೊಲೀಸ್ ಠಾಣೆಯಲ್ಲಿ ತಂದಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಚಾಸ 1 ರವರು ದೂರನ್ನು ದಾಖಲಿಸುವ ಪೂರ್ವದಲ್ಲಿ ವಾಹನವನ್ನು ಮತ್ತು ಮರಳನ್ನು ತಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ.

4. ನಾನು ನನ್ನ ತನಿಖಾ ಅವಧಿಯಲ್ಲಿ ಸದರಿ ವಾಹನವನ್ನು ಚಾಸ 2 ರವರು ತಂದಿರುತ್ತಾರೆ. ಚಾಸ 2 ರವರಿಗೆ ಟಿಪ್ಪರ್ ಲಾರಿಯನ್ನು ಚಲಾಯಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ಪಂಚನಾಮೆಯಲ್ಲಿ ಪಂಚರಿಗೆ ನೀಡಿದ ನೋಟಿಸ್ ನ ಸಮಯ ಬರೆಯಲು ತೊಂದರೆ ಇರಲಿಲ್ಲ ಎಂದರೆ ಸರಿ.

5. ಆರೋಪಿ 1 ರವರು ನನ್ನ ತನಿಖಾ ಅವಧಿಯಲ್ಲಿ ಯಾವುದೇ ಸ್ವ ಇಚ್ಚೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಆರೋಪಿ 1 ರವರ ಸ್ವ ಇಚ್ಚೆ ಹೇಳಿಕೆಯನ್ನು ಪಂಚರ ಸಮಕ್ಷಮ ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸರಿ.

6. ನಾನು ಪಂಚನಾಮೆಗೆ ಹೋದಾಗ ಕೃತ್ಯ ನಡೆದ ಸ್ಥಳದಲ್ಲಿ ಮರಳು ಮತ್ತು ಲಾರಿ ಇರಲಿಲ್ಲ ಎಂದು ಸೂಚಿಸಿದರೆ ಸರಿ. ನಿಪಿ2 ಯಾವ ಸ್ಥಳದ ಭಾವ ಚಿತ್ರ ಆಗಿರುತ್ತದೆ ಎಂದರೆ ಸಾಕ್ಷಿಯು

ಲಾರಿಗೆ ಮರಳು ತುಂಬಿದ ಸ್ಥಳದ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ2 ರಲ್ಲಿ ತೋರಿಸಿದ ಸ್ಥಳವು ಲಾರಿ ನಿಲ್ಲಲು ಸೂಕ್ತವಾದ ಸ್ಥಳ ಆಗಿರುವುದಿಲ್ಲ ಮತ್ತು ಸದರಿ ಸ್ಥಳದಲ್ಲಿ ಲಾರಿಯ ಚಕ್ರದ ಗುರುತುಗಳು ಇರುವುದಿಲ್ಲ ಎಂದರೆ ಸರಿಯಲ್ಲ.

7. ಚಾಸ 1 ರವರು ನನ್ನ ಮೇಲಾಧಿಕಾರಿಯಾಗಿರುವುದರಿಂದ ಸುಳ್ಳು ತನಿಖೆಯನ್ನು ಕೈಗೊಂಡು ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.